ಈ ವರ್ಷ ಎಷ್ಟು ಕೊಟ್ಟಿದ್ದೀರಿ? ಈ ವರ್ಷ ಕೊಟ್ಟಿಲ್ಲವೆಂದು ನನಗನ್ನಿಸುತ್ತದೆ, ತಾವು ಏನು ೩ ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೀರಿ ಅದು ಅಲ್ಲಿರುವ ಸಿಬ್ಬಂದಿ ಕ್ವಾರ್ಟರ್ಸ್‌ಗಳಿಗಾಗಿ ಆಗಿದೆ. ಇದರಿಂದ ಯೋಜನೆಗೆ ಏನೂ ಖರ್ಚು ಆಗಿಲ್ಲ. ಈ ವರ್ಷ ಈ ಬಗ್ಗೆ ಎಷ್ಟು ಖರ್ಚು ಮಾಡುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. —ಮಾನ್ಯ ಬಸವರಾಜ ಪಾಟೀಲ್ ಅವರ ಪ್ರಶ್ನೆಯೇ ಬೇರೆ. ಅದಕ್ಕೆ ಸರಿಯಾದ ಉತ್ತರ ಬಂದಿಲ್ಲ. (ಗೊಂದಲ) ಅವರಿಗೆ ಉತ್ತರದ ಪ್ರತಿಯನ್ನು ದೊರಕಿಸಿ ಕೊಟ್ಟಿಲ್ಲ, ಮಂತ್ರಿಗಳು ಉತ್ತರಪನ್ನು ಓದಿದರೇ ಹೊರತು ಅದರ ಪ್ರತಿ ಮಾನ್ಯ ಸದಸ್ಯರಿಗೆ ದೊರಕಿಲ್ಲ.

ಅಧ್ಯಕ್ಷರು.—ಮಂತ್ರಿಗಳು ಉತ್ತರವನ್ನು ಓದಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಉಪ ಪ್ರಶ್ನೆ ಕೇಳಲು ಅವರಿಗೆ ಉತ್ತರದ ಪ್ರತಿ ಬೇಡವೆ?

(ಗೊಂದಲ)

ಶ್ರೀ ಬಸವರಾಜ ಪಾಟೀಲ್.— ನಾನು ಕೇಳುವುದು, ದುಡ್ಡು ಕೊಟ್ಟಿದ್ದಾರೆಯೇ ಎಂದು.

ಅಧ್ಯಕ್ಷರು.—ಬಸವರಾಜ ಪಾಟೀಲರು ಏನು ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ತಾವೆಲ್ಲರೂ ದಯವಿಟ್ಟು ಕುಳಿತುಕೊಳ್ಳಿ. ಬಸವರಾಜ ಪಾಟೀಲರೇ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್. ಡಿ. ದೇವೇಗೌಡ.—ಬೆಳೆ ಪರಿಹಾರವನ್ನು ಕೊಟ್ಟಿಲ್ಲವೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಈ ವರ್ಷ ನಾವು ೧೪ ಲಕ್ಷ ೩೪ ಸಾವಿರ ರೂಪಾಯಿಗಳ ಬೆಳೆ ಪರಿಹಾರವನ್ನು ಕೊಟ್ಟಿದ್ದೇವೆ, ಈಗ ತಾನೇ ನಾನು ಒಂದು ವಾರದ ಹಿಂದೆ ಜಿಲ್ಲಾ ಪ್ರವಾಸ ಹೋಗಿದ್ದ ಕಾಲದಲ್ಲಿ ಪರಿಸ್ಥಿತಿ ಗೊತ್ತಾದ ಮೇಲೆ, ಮಾನ್ಯ ಮುಖ್ಯ ಮಂತ್ರಿಯವರ ಜೊತೆ ದೂರವಾಣಿ ಮೂಲಕ ಪ್ರಸ್ತಾಪ ಮಾಡಿ ೩೬ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಪ್ರತ್ಯೇಕವಾಗಿ ಬೆಳೆ ಪರಿಹಾರ ಕೊಡುವುದಕ್ಕೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ಈ ವಾರದಲ್ಲಿ ಅದನ್ನು ಬಟವಾಡೆ ಮಾಡುತ್ತೇವೆ. ಸುಮಾರು ೧೫೭ ಲಕ್ಷ ರೂಪಾಯಿಗಳ ಪ್ರಾಜೆಕ್ಟ್‌ನ ಪ್ರಿಲಿಮ್ಸ್‌ರಿ ವರ್ಕ್ಸ್‌ಗೆ ಎಂದರೆ, ಡೈವರ್ಸನ್ ಆಫ್ ರೋಡ್ಸ್ ಇರಬಹುದು, ಕ್ವಾರ್ಟರ್ಸ್ ಇರಬಹುದು, ಫೌಂಡೇಷನ್ ಇರಬಹುದು—ಈ ಬಾಬುಗಳಿಗೆ ಇಲ್ಲಿಯವರೆಗೆ ಹಣ ಖರ್ಚು ಆಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿನ ಪದವಿ ಪೂರ್ವ ಕಾಲೇಜು ಹಾಗೂ ಪ್ರಥಮ ದರ್ಜೆ ಕಾಲೇಜುಗಳ ಬಗ್ಗೆ

೩೬೬. ಶ್ರೀ ಪಟ್ಟಮಕ್ಕಿ ರತ್ನಾಕರ್ (ತೀರ್ಥಹಳ್ಳಿ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆಯಲ್ಲಿನ ಪದವಿ ಪೂರ್ವ ಕಾಲೇಜುಗಳ ಹಾಗೂ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಹಾಗೂ ಇರುವ ಸ್ಥಳಗಳು ಯಾವುವು?

ಆ) ಈ ಮೇಲ್ಕಂಡ ವಿದ್ಯಾ ಸಂಸ್ಥೆಗಳಲ್ಲಿ ಖಾಲಿ ಇರುವ ಅಧ್ಯಾಪಕರ ಸಂಖ್ಯೆ ಹಾಗೂ ಬೋಧನಾ ವಿಷಯಗಳೇನು? (ಪ್ರತಿ ಕಾಲೇಜಿನ ಪ್ರತ್ಯೇಕ ವಿವರಗಳು)

ಇ) ಸದರಿ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೀವರಾಜ್ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಶಿವಮೊಗ್ಗ ಜಿಲ್ಲೆಯಲ್ಲಿ ೨೪ ಪದವಿ ಪೂರ್ವ ಸರ್ಕಾರಿ ಕಾಲೇಜುಗಳು ಹಾಗೂ ೬ ಸರ್ಕಾರಿ ಪ್ರಥಮ ಕಾಲೇಜುಗಳು ಇವೆ. ಇವುಗಳು ಇರುವ ಸ್ಥಳಗಳ ಪಟ್ಟಿಯನ್ನು ಅನುಬಂಧ-೧ ರಲ್ಲಿ ತೋರಿಸಲಾಗಿದೆ.

ಆ) ಉತ್ತರವನ್ನು ಅನುಬಂಧ–೨ರಲ್ಲಿ ತೋರಿಸಲಾಗಿದೆ.

ಇ) ಖಾಲಿ ಇರುವ ಹುದ್ದೆಗಳಲ್ಲಿ ಮಾಸಿಕ ರೂ. ೧೦೪೦ ಕ್ರೋಢಿಕೃತ ವೇತನದ ಮೇಲೆ ಕರಾರು ಆಧಾರದ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಪದವಿ ಕಾಲೇಜಿನಲ್ಲಿ ಬೋಧನಾ ಕಾರ್ಯ ಅಧಿಕವಾಗಿರುವ ಬೋಧನಾ ವಿಷಯದಲ್ಲಿ ಬೋಧಕರ ಕೊರತೆಯನ್ನು ನೀಗಿಸಲು ರೂ. ೪೦೦ರ ಅಂಶ ಕಾಲಿಕ ವೇತನದ ಮೇಲೆ ಉಪನ್ಯಾಸಕರನ್ನು ನೇಮಕ ಮಾಡಲಾಗಿದೆ. ೨೯೨ ಉಪನ್ಯಾಸಕರ ಹುದ್ದೆಗಳನ್ನು ಸೃಷ್ಟಿಸಲು ಸರ್ಕಾರದಿಂದ ಶೀಘ್ರ ಕ್ರಮ ಕೈಗೊಳ್ಳಲಾಗುವುದು. ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ತುಂಬಲು ವಿಶೇಷ ನೇಮಕಾತಿ ಸಮಿತಿಯಿಂದ ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಕ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ —೧

ಶಿವಮೊಗ್ಗ ಜಿಲ್ಲೆಯಲ್ಲಿ ಇರುವ ಸರ್ಕಾರಿ ಪದವಿ ಪೂರ್ವ ಹಾಗೂ ಪ್ರಥಮದರ್ಜೆ ಕಾಲೇಜುಗಳು ಇರುವ ಸ್ಥಳಗಳು ಈ ಕೆಳಕಂಡಂತೆ ಇವೆ :

	ಪದವಿ ಪೂರ್ವ ಕಾಲೇಜುಗಳು
೧)	ಹನವಟ್ಟಿ ಸೊರಬ ತಾಲ್ಲೂಕು
೨)	ಆನಂದಪುರ, ಸೊರಬ ತಾಲ್ಲೂಕು
೩)	ಓಲ್ಡ್ ಟೌನ್, ಭದ್ರಾವತಿ
೪)	ಸಿಲ್ವರ್ ಜ್ಯೂಬಿಲಿ ಜಿ.ಸಿ. ಭದ್ರಾವತಿ ನ್ಯೂಟೌನ್
೫)	ಚನ್ನಗಿರಿ
೬)	ಹೊಸನಗರ
೭)	ಕಲ್ಲಿಹಾಳ್, ಭದ್ರಾವತಿ ತಾಲ್ಲೂಕು
೮)	ಮಾಲೂರು, ತದೂರು, ತೀರ್ಥಹಳ್ಳಿ
೯)	ಮೇಗರಹಳ್ಳಿ, ತೀರ್ಥಹಳ್ಳಿ ತಾಲ್ಲೂಕು
೧೦)	ನಿಟ್ಟೂರು, ಹೊಸನಗರ ತಾಲ್ಲೂಕು
೧೧)	ನ್ಯಾಮತಿ, ಹೊನ್ನಾಳಿ ತಾಲ್ಲೂಕು
೧೨)	ಸಾಗರ
೧೩)	ಶಿಕಾರಿಪುರ
೧೪)	ಶಿರಾಳಕೊಪ್ಪ
೧೫)	ಸೊರಬ
೧೬)	ಸಂತೆಬೆನ್ನೂರು, ಚನ್ನಗಿರಿ ತಾಲ್ಲೂಕು
೧೭)	ತ್ಯಾವಣಗಿ, ಚನ್ನಗಿರಿ ತಾಲ್ಲೂಕು
೧೮)	ರಿಬ್ಬನ್ ಪೇಟೆ
೧೯)	ತೀರ್ಥಹಳ್ಳಿ
೨೦)	ಶಿವಮೊಗ್ಗ
೨೧)	ಬಸವಾಣಿ ತೀರ್ಥಹಳ್ಳಿ ತಾಲ್ಲೂಕು
೨೨)	ಜೀನಹಳ್ಳಿ, ಹೊನ್ನಾಳಿ ತಾಲ್ಲೂಕು
೨೩)	ಹೊಳೆಹೊನ್ನೂರು, ಭದ್ರಾವತಿ ತಾಲ್ಲೂಕು
೨೪)	ಹಿತ್ತಲ, ಶಿಕಾರಿಪುರ ತಾಲ್ಲೂಕು

ಪ್ರಥಮದರ್ಜೆ ಕಾಲೇಜುಗಳು

೧) ಸಹ್ಯಾದ್ರಿ ಕಲಾ ಕಾಲೇಜು ಶಿವಮೊಗ್ಗ
೨) ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ
೩) ಸರ್ಕಾರೀ ಪ್ರಥಮ ದರ್ಜೆ ಕಾಲೇಜು, ಶಿಕಾರಿಪುರ
೪) ಡಿಟೋ ಚನ್ನಗಿರಿ
೫) ಡಿಟೋ ಹೊಸನಗರ
೬) ಡಿಟೋ ಸೊರಬ

ಅನುಬಂಧ — ೨

ಶಿವಮೊಗ್ಗ ಜಿಲ್ಲೆಯ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಗಳು ಖಾಲಿ ಇರುವ ಸಂಖ್ಯೆ ಈ ಕೆಳಕಂಡಂತೆ ಇದೆ :

ಪದವಿ ಪೂರ್ವ ಕಾಲೇಜುಗಳಲ್ಲಿ

೧) ಸರ್ಕಾರಿ ಪದವಿ ಪೂರ್ವ ಕಾಲೇಜು, ನಿಟ್ಟೂರು ಆಂಗ್ಲ ಭಾಷಾ ಉಪನ್ಯಾಸಕರು — ೧
೨) ಸರ್ಕಾರಿ ಪದವಿ ಪೂರ್ವ ಕಾಲೇಜು ಮೇಗರವಳ್ಳಿ ವಾಣಿಜ್ಯ ಶಾಸ್ತ್ರ — ೧
೩) ಸರ್ಕಾರಿ ಪದವಿ ಪೂರ್ವ ಕಾಲೇಜು ಜೀನಹಳ್ಳಿ ವಾಣಿಜ್ಯ ಶಾಸ್ತ್ರ — ೧
೪) ಸರ್ಕಾರಿ ಪದವಿ ಪೂರ್ವ ಕಾಲೇಜು ಆನವಟ್ಟಿ ಅರ್ಥಶಾಸ್ತ್ರ — ೧

ಪ್ರಥಮ ದರ್ಜೆ ಕಾಲೇಜುಗಳಲ್ಲಿ

೧) ಸಹ್ಯಾದ್ರಿ ವಿಜ್ಞಾನ ಕಾಲೇಜು ಶಿವಮೊಗ್ಗ ಭೌತಶಾಸ್ತ್ರ ಉಪನ್ಯಾಸಕರು — ೨
೨) ಸಹ್ಯಾದ್ರಿ ವಿಜ್ಞಾನ ಕಾಲೇಜು ರಸಾಯನ ಶಾಸ್ತ್ರ ಉಪನ್ಯಾಸಕರು — ೩
೩) ಸಹ್ಯಾದ್ರಿ ವಿಜ್ಞಾನ ಕಾಲೇಜು ಭೂಗರ್ಭ ಶಾಸ್ತ್ರ ಉಪನ್ಯಾಸಕರು — ೧

ಶ್ರೀ ಪಟಮಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ ನನಗೆ ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಉತ್ತರವನ್ನು ನೋಡಿ ಸ್ವಲ್ಪ ಗೊಂದಲ ಉಂಟಾಗಿದೆ. ಮಾನ್ಯ ಸಚಿವರ ಉತ್ತರವನ್ನು ನೋಡಿದರೆ ನಮ್ಮ ಜಿಲ್ಲೆಯಲ್ಲಿರತಕ್ಕಂಥ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರತಕ್ಕಂಥ ಎಲ್ಲಾ ಹುದ್ದೆಗಳು ತುಂಬಲಾಗಿದೆ, ಯಾವುದೂ ಖಾಲಿ ಇಲ್ಲವೆನ್ನುವ ಭಾವನೆ ಬರುತ್ತದೆ. ಆದರೆ ಯಾವುದೇ ಪದವಿ ಪೂರ್ವ ಕಾಲೇಜಿಗೆ ಹೋದರೆ ಅಧ್ಯಾಪಕರುಗಳು ಇರುವುದಿಲ್ಲ. ವಾಣಿಜ್ಯ, ಕಲೆ, ಭೌತಶಾಸ್ತ್ರ, ರಸಾಯನಶಾಸ್ತ್ರ ಇವೇ ಮುಂತಾದ ವಿಷಯಗಳ ಅಧ್ಯಾಪಕರು ಇಲ್ಲವೆಂದು ದೂರು ಬರುತ್ತಾ ಇದೆ, ಇದಕ್ಕೆ ತಮ್ಮನ್ನು ಕೇಳಿದರೆ ಮೈಸೂರು, ಬೆಂಗಳೂರು, ಗುಲ್ಬರ್ಗಾದಲ್ಲಿರತಕ್ಕಂಥ ಅಧ್ಯಾಪಕರುಗಳನ್ನು ಹಾಕಿರುತ್ತೇವೆಂದು ಹೇಳುತ್ತೀರಿ. ಅವರು ಯಾರೂ ಕೂಡ ಇಷ್ಟು ದೂರ ಬಂದು ಪಾಠ ಪ್ರವಚನಗಳನ್ನು ಮಾಡಲಿಕ್ಕೆ ತಯಾರಾಗಿಲ್ಲ. ಇವೊತ್ತಿಗೂ ಕೂಡ ತಾವು ಕೊಟ್ಟಿರತಕ್ಕಂಥ ಅಂಕಿ ಅಂಶಗಳು ಸರಿಯಾಗಿಲ್ಲ. ಅಂತು ಹೋದ ಅಧ್ಯಾಪಕರುಗಳು ಪಾಠಗಳನ್ನು ಪ್ರಾರಂಭ ಮಾಡಿಲ್ಲವೆನ್ನುವುದು ತಮಗೆ ಗೊತ್ತಿದೆಯೇ?

ಶ್ರೀ ಜೀವರಾಜ ಆಳ್ವ.— ಶಿವಮೊಗ್ಗ ಸಹ್ಯಾದ್ರಿ ಉನ್ನತ ಕಾಲೇಜಿನಲ್ಲಿ ಅಧ್ಯಾಪಕರುಗಳು ಇಲ್ಲವೆಂದು ಸರ್ಕಾರದ ಗಮನಕ್ಕೆ ಬಂದಾಗ ಹಲವಾರು ಉಪನ್ಯಾಸಕರನ್ನು ಟ್ರಾನ್ಸ್‌ಫರ್ ಮಾಡಿರುತ್ತೇವೆ. ಮತ್ತೆ ಹೋದವರು ಕೆಲಸ ಆರಂಭ ಮಾಡಿಲ್ಲವೆಂದು ಹೇಳಿರುತ್ತಾರೆ. ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪಟ್ಟಣಶೆಟ್ಟಿ ರತ್ನಾಕರ್.--ಅಧ್ಯಾಪಕರುಗಳನ್ನು ಹಾಕಿದ್ದೇವೆಂದು ಹೇಳಿರುತ್ತಾರೆ. ಆದರೆ ಅಧ್ಯಾಪಕರುಗಳೇ ಬಂದಿಲ್ಲ. ರಸಾಯನ ಶಾಸ್ತ್ರ ಅಧ್ಯಾಪಕರುಗಳು ಇಲ್ಲವೆಂಬುದು ತಮಗೆ ಗೊತ್ತಿದೆ. ತಾವು ಶಾಲಾ ಸಮಾರಂಭಗಳು ಬೆಂಗಳೂರು ಮತ್ತು ಮಂಗಳೂರುಗಳಿಗೆ ಮಾತ್ರ ಹೋಗುತ್ತೀರಿ. ಗ್ರಾಮಾಂತರ ಪ್ರದೇಶಗಳಿಗೆ ಬಂದು ನೋಡಿದರೆ ವಸ್ತು ಸ್ಥಿತಿ ಅರ್ಥವಾಗುತ್ತದೆ. ನಮ್ಮ ಜಿಲ್ಲೆಯ ತೀರ್ಥಹಳ್ಳಿ, ಹೊಸನಗರ, ಮತ್ತು ನಿಟ್ಟೂರು ಕಾಲೇಜುಗಳಿಗೆ ಬಂದು ನೋಡಿದಲ್ಲಿ ತಮಗೆ ಅರ್ಥ ವಾಗುತ್ತದೆ. ಎಲ್ಲಾ ಕಾಲೇಜುಗಳ ಒಂದು ಆಂಕಿ ಅಂಶಗಳ ಪಟ್ಟಿಯನ್ನೇ ಕೊಟ್ಟಿರುತ್ತೇವೆ. ಇದನ್ನು ಯಾವರೀತಿ ಸರಿಪಡಿಸುತ್ತೀರೆಂದು ಕೇಳುತ್ತೇನೆ. ಇದನ್ನು ಹೇಗೆ ಸರಿಮಾಡುತ್ತೀರಿ? ನೀವು ತಪ್ಪೋ ನಾವು ತಪ್ಪೋ? ಯಾರಂ ಸರಿ ಇದರಲ್ಲಿ? ಈ ಪರಿಸ್ಥಿತಿ ನಿಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೊ?

ಶ್ರೀ ಜೀವರಾಜ ಆಳ್ವ.--ಅಧ್ಯಕ್ಷರೇ, ಮಾನ್ಯ ಸದಸ್ಯರು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಅಲ್ಲಿಗೆ ಪೋಸ್ಟಿಂಗ್ ಆದರೂ ಲೆಕ್ಚರರ್ ಹೋಗಿಲ್ಲವೆಂದು ಹೇಳಿದ್ದಾರೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ಎನ್. ನಾಯಂಕ್.--ಇದಕ್ಕೆ ಮುಂಚೆ ನಿಮಗೆ ಏನೂ ಗೊತ್ತಾಗಲಿಲ್ಲವೆಂದು ಆಯಿತಾ.....

ಅಧ್ಯಕ್ಷರು.--ನಿಮಂಗೆ ರೂಲ್ಸ್ ರೆಗ್ಯುಲೇಷನ್ ಗೊತ್ತಿಲ್ಲವೇನಂ? ಶ್ರೀ ಉಸ್ತಾದ್‌ರವರೇ, ನೀವು ಪ್ರಶ್ನೆಯನ್ನು ಕೇಳಿ.

ಶ್ರೀ ಆರ್. ಎನ್. ನಾಯಕ್--ಮಾನ್ಯ ಮಂತ್ರಿಗಳು ಶಿಕ್ಷಣ ಖಾತೆಯಲ್ಲಿ ಕೆಲಸ ಮಾಡುತ್ತಿದ್ದಾರಲ್ಲ....

ಅಧ್ಯಕ್ಷರು.--ನೀವು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಹರಪನಹಳ್ಳಿಯಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು ಸ್ಥಾಪನೆಯ ಬಗ್ಗೆ

೧೭೧ ಶ್ರೀ ಬಿ. ಹೆಚ್. ಯಂಕಾನಾಯಕ್ (ಹರಪನಹಳ್ಳಿ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಳ್ಳಾರಿ ಜಿಲ್ಲೆ ಹರಪನಹಳ್ಳಿಯಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು ಸ್ಥಾಪಿತವಾಗಿ ನೂರು ವರ್ಷ ತುಂಬುತ್ತಿರುವುದು ನಿಜವಲ್ಲವೇ ?

ಆ) ಸದರಿ ಸಂಸ್ಥೆಯವರು ಅನೇಕ ನ್ಯೂನತೆಗಳು ಮತ್ತು ಪಿಠೋಪಕರಣಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಪದವಿ ಪೂರ್ವ ಶಿಕ್ಷಣದಲ್ಲಿ ವಾಣಿಜ್ಯ ಮತ್ತು ಪೂರ್ಣ ಪ್ರಾಥಮಿಕ ಶಿಕ್ಷಣ ತರಗತಿಗಳನ್ನು ಮುಂಜೂರು ಮಾಡಬೇಕಾಗಿರುವುದು ನಿಜವಲ್ಲವೇ ?

ಈ) ಹಾಗಿದ್ದಲ್ಲಿ ಈ ಬೇಡಿಕೆಗಳನ್ನು ಪೂರೈಸಿ ಈ ಸಂಸ್ಥೆಯನ್ನು ಪುನಶ್ಚೇತನಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು). -–

ಅ) ನಿಜವಲ್ಲ ಕಾಲೇಜು ಸ್ಥಾಪನೆ--೧೯೭೨ರಲ್ಲಿ

ಆ) ಬಂದಿದೆ.

ಇ) ಪ್ರಸ್ತಾಪನೆ ಬಂದಿರುವುದಿಲ್ಲ.

ಈ) ಸೂಕ್ತ ಪ್ರಸ್ತಾವನೆಗಳು ಆ ಮಂತ್ರಿ ಇ ಗಳಿಗೆ ಬಂದಲ್ಲಿ ಪರಿಶೀಲಿಸಲಾಗುವುದು.

ಶ್ರೀ ಬಿ. ಹೆಚ್. ಯಂಕಾನಾಯಕ್.--ಬಳ್ಳಾರಿ ಜಿಲ್ಲೆ ಹರಪನಹಳ್ಳಿಯಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು ಸ್ಥಾಪಿತವಾಗಿ ನೂರು ವರ್ಷಗಳಾದರೂ ಅಲ್ಲಿ ಪಿಠೋಪಕರಣಗಳ ವ್ಯವಸ್ಥೆ ಸರಿ